# ವಿಲಕ್ಷಣಮೌನಿ

( ಸಂಭಾಷಣೆ )

ಶ್ರೀಯುತ " ಅರುಣಗಿರಿ "

ಅಧ್ಯಾತ್ಮಗ್ರಂಥಾವಳಿ

# ವಿಲಕ್ಷಣಮೌನಿ

( ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ತಿಳಿಸುವ ಒಂದು ಸಂಭಾಷಣೆ )

ಬರೆದವರು :

ಶ್ರೀಯುತ ' ಅರುಣಗಿರಿ '

ಕ್ರಮಾಂಕ ೪೩

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1995

ಒಂದನೆಯ ಮುದ್ರಣ : 1932
ಎರಡನೆಯ ಮುದ್ರಣ : 1953
ಮೂರನೆಯ ಮುದ್ರಣ : 1986
ನಾಲ್ಕನೆಯ ಮುದ್ರಣ : 1995

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಬಿನ್ನಹ

ಈ ಬರಹವು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ನಾಲ್ಕನೆಯ ಸಂಪುಟದಲ್ಲಿ ಮೊದಲು ಬೆಳಕಿಗೆ ಬಂದಿತು. ಇದರಲ್ಲಿರುವ ಸಾರವತ್ತಾದ ವಿಚಾರಗಳನ್ನು ಕಂಡವರನೇಕರು ಇದು ಒಂದು ಕೈಹೊತ್ತಿಗೆಯಾಗಿದ್ದರೆ ಚೆನ್ನಾಗಿದ್ದೀತೆಂದು ಸೂಚಿಸಿದ್ದರಿಂದ ನಾಲ್ಕನೆಯ ಬಾರಿಗೆ ಇದನ್ನು ಈ ಪುಸ್ತಕರೂಪದಲ್ಲಿ ಹೊರಕ್ಕೆ ತಂದಿದ್ದೇವೆ.

ತಾ|| 1-6-1995 ಪ್ರಕಾಶಕರು.

# ಪೀಠಿಕೆ

ದಿವಂಗತ ಕೆ. ಎ. ಕೃಷ್ಣಸ್ವಾಮಿ ಅಯ್ಯರ್‌ರವರು 'ಅರುಣಗಿರಿ' ಎಂಬ ಗುಪ್ತನಾಮದಿಂದ ರಚಿಸಿದ್ದ ಈ ಚಿಕ್ಕ ಗ್ರಂಥವು ಮೂರ್ತಿಯಲ್ಲಿ ಸಣ್ಣದಾದರೂ ಕೀರ್ತಿಯಲ್ಲಿ ದೊಡ್ಡದಾಗಿರುತ್ತದೆ. ಆ ಮಹನೀಯರು ಇಲ್ಲಿ ದಶೋಪನಿಷತ್ತುಗಳ ಸಾರವನ್ನು ಸೂತ್ರಪ್ರಾಯವಾದ ಸಂಸ್ಕೃತವಾಕ್ಯಗಳಲ್ಲಿ ಹಿಡಿದಿಟ್ಟಿರುವ ಕೌಶಲವು ತಜ್ಞರಾದ ಅನೇಕ ವಾಚಕರನ್ನು ತಲೆದೂಗಿಸಿದೆ.

ಈ ಸಂಸ್ಕರಣದಲ್ಲಿ ಮೊದಲಿನಿಂದ ಕೊನೆಯವರೆಗೂ ಭಾಷೆಯನ್ನು ತಿದ್ದಿಸಿ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರಿಂದ ಬೇಕಾದ ವಿಷಯಗಳನ್ನು ಬರೆಯಿಸಿ ಸೇರಿಸಿ ಗ್ರಂಥವನ್ನು ಎಲ್ಲಾ ವಿಧದಿಂದಲೂ ಪೂರ್ಣಗೊಳಿಸಿರುತ್ತದೆ. ಮೂಲದಲ್ಲಿ ಪರಾಮೃಷ್ಟವಾಗಿದ್ದ ಪ್ರಮಾಣವಚನಗಳನ್ನು ಪೂರ್ಣವಾಗಿ ಸ್ಥಾನಸಂಖ್ಯಾಸಮೇತವಾಗಿ ಕೊಟ್ಟಿರುವ ಪರಿಶಿಷ್ಟವೊಂದನ್ನು ಜೋಡಿಸಿದೆ. ಗ್ರಂಥವು ಮೊದಲಿಗಿಂತಲೂ ಹೆಚ್ಚು ಓದುಗರ ಮನಸ್ಸನ್ನು ಸೆಳೆಯುವದೆಂದು ಈಗ ಕಾರ್ಯಾಲಯದವರು ನಂಬಿರುತ್ತಾರೆ.

ಸಂಪಾದಕ.

॥ ಓಂ ॥

# ವಿಲಕ್ಷಣ ಮೌನಿ

ಬ್ರಹ್ಮಾಭ್ಯಾಸಕ್ಕೆ ಮೌನವು ಒಂದು ಉತ್ತಮವಾದ ಸಾಧನವೆಂದು ಸಂಪ್ರದಾಯವನ್ನು ಬಲ್ಲವರು ಹೇಳುವರು. ಈ ಮೌನವು ಅನೇಕ ವಿಧವಾಗಿರುವದು. ನಿದ್ರೆಯಲ್ಲಂತು ಪ್ರಯತ್ನವಿಲ್ಲದೆಯೇ ಎಲ್ಲರಿಗೂ ಮೌನವಿರುವದು. ಅದನ್ನು ಬಿಟ್ಟರೆ ಜಾಗ್ರತ್ಕಾಲದಲ್ಲಿ ಜನಸಂಘದಲ್ಲಿರುವಾಗ ಪ್ರಯತ್ನಪೂರ್ವಕವಾಗಿ ವಾಙ್ನಿಯಮನವನ್ನು ಮಾಡುವದೇ ಒಂದು ಸಾಧನ. ಕೆಲವರು ಭೋಜನಕಾಲದಲ್ಲಿಯೂ ನಿತ್ಯಕರ್ಮಾನುಷ್ಠಾನಕಾಲದಲ್ಲಿಯೂ ಈ ನಿಯಮವನ್ನು ಅಭ್ಯಸಿಸುವರು. ಮಹಾತ್ಮಗಾಂಧಿಯವರು ಸೋಮವಾರದಲ್ಲಿ ಮೌನವನ್ನಾಚರಿಸುತ್ತಿದ್ದರು. ಈ ಮೌನದಿಂದ ಉಂಟಾಗುವ ಸುಖವು ಮೌನಿಗಳಿಗೇ ತಿಳಿಯಬೇಕು ; ಮಿಕ್ಕವರಿಗೆ ತಿಳಿಯಲಾರದು. ಸಾಮಾನ್ಯಜನರಿಗೇನೋ ಬಾಯಿಮುಚ್ಚಿಕೊಂಡಿರುವದೇ ಸಾಧ್ಯವಿಲ್ಲ.

ಕೆಲವು ದಿವಸಕ್ಕೆ ಮುಂಚೆ ಚಿತ್ರದುರ್ಗಕ್ಕೆ ಸಮೀಪವಾದ ಬೆಟ್ಟದ ತಪ್ಪಲಿನಲ್ಲಿ ಇರುವ 'ಕಾಂತಾಪುರ' ಎಂಬ ಗ್ರಾಮಕ್ಕೆ ನಾನು ಹೋಗಿದ್ದೆನು. ಅದಕ್ಕೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಒಂದು ತಟಾಕ, ತೋಪು, ಮಂಟಪ–ಇವೆಲ್ಲ ಇರುವವು. ಮಂಟಪದಲ್ಲಿ ಒಬ್ಬ ಸಾಧುಗಳು ಇರುವರೆಂದು ತಿಳಿದು ಅವರ ದರ್ಶನಾರ್ಥವಾಗಿ ಹೋದೆನು. ಅವರ ಹೆಸರು ಪುಚ್ಛಬ್ರಹ್ಮವಾದಿಗಳಂತೆ ! ಅವರ ತೇಜಸ್ಸನ್ನು ಕಂಡು ಪುಳಕಾಂಕಿತನಾಗಿ ಅವರಿಗೆ ದಂಡಪ್ರಣಾಮವನ್ನು ಮಾಡಿ ಅವರ ಅಪ್ಪಣೆಯನ್ನು ಪಡೆದು ಕುಳಿತೆನು. ಅವರು ನನ್ನ ಮನೋಭಿಲಾಷೆಯನ್ನು ಅರಿತು ಇಂತೆಂದರು : "ಅಪ್ಪ, ನಿನಗೆ ತತ್ತ್ವವಿಚಾರದಲ್ಲಿ ಆಸಕ್ತಿಯುಂಟು. ನಿನಗೋಸ್ಕರ ಶ್ರೇಯಸ್ಕರವಾದ ಒಬ್ಬ ವಿಲಕ್ಷಣಮೌನಿಯ ಚರಿತ್ರೆಯನ್ನು ಹೇಳುವೆನು ; ಅವಧಾನದಿಂದ ಕೇಳುವನಾಗು :–

ಬಹುಕಾಲದ ಹಿಂದೆ ಭೋಜರಾಜನು ಕವಿಗಳೇ ಮುಂತಾದ ವಿದ್ಯಾವಿಶಾರದರಿಗೆ ಯಾವಾಗಲೂ ಬಲುಬಗೆಯಿಂದ ಪ್ರೋತ್ಸಾಹಮಾಡುತ್ತಿದ್ದನೆಂದು ಎಲ್ಲೆಲ್ಲಿಯೂ ಪ್ರಸಿದ್ಧವಷ್ಟೆ. ಒಂದು ದಿನ ಅವನ ಆಸ್ಥಾನದ ಮುಖ್ಯ ಕವಿಯಾದ ಕಾಳಿದಾಸನು ಎಂದಿನ ಹಾಗೆ ಮಧ್ಯಾಹ್ನದ ಮೇಲೆ ಸುಮಾರು ನಾಲ್ಕು ಘಂಟೆಯ ಸಮಯದಲ್ಲಿ ಮನೆಯನ್ನು ಬಿಟ್ಟು ಹೊರಗೆ ಬಂದು ಆಸ್ಥಾನಕ್ಕೆ ಹೋಗಲು ತನ್ನ ಮೇನಾದಲ್ಲಿ ಕೂರುವದಕ್ಕೆ ಹೋದನು. ಆ ಕಾಲಕ್ಕೆ ಒಬ್ಬ ವೃದ್ಧಬ್ರಾಹ್ಮಣನು ''ಜಯಜಯ''ಶಬ್ದದೊಡನೆ ಹತ್ತಿರಕ್ಕೆ ಬಂದನು. ಆತನ ಬ್ರಹ್ಮವರ್ಚಸ್ಸಿಗೆ ಬೆರಗಾಗಿ ಮಹಾಕವಿಯು ಆತನಿಗೆ ವಂದನೆಮಾಡಿ, ''ತಾವು ಯಾರು? ತಿಳಿಸಬೇಕು''ಎಂದನು. ಆಗ ಬ್ರಾಹ್ಮಣನು "ಯಥಾಯೋಗ್ಯಮೌನೀ" ಎಂದರು. "ತಮ್ಮ ಕಾರ್ಯವೇನು?" ಎಂದದ್ದಕ್ಕೆ "ರಾಜಸನ್ಮಾನಮ್" ಎಂದು ಉತ್ತರಕೊಟ್ಟನು. ಅದನ್ನು ಕೇಳಿ ಇಂಗಿತಜ್ಞನಾದ ಆ ಮಹಾಕವಿಯು "ಹಾಗಾದರೆ ನನ್ನ ಸಂಗಡ ಮೇನಾದಲ್ಲಿ ಕೂರೋಣವಾಗಲಿ, ಮಹಾರಾಜನ ಸನ್ನಿಧಿಗೆ ಕರೆದುಕೊಂಡು ಹೋಗುವೆನು" ಎಂದು ವಿಜ್ಞಾಪಿಸಿದನು. ಅನಂತರ ಇಬ್ಬರೂ ಮೇನಾದಲ್ಲಿ ಹೋಗುತ್ತಿರುವಾಗ ಕಾಳಿದಾಸನು "ತಾವು ಕವಿಗಳೊ. ಪಂಡಿತರೊ ? ತಮ್ಮ ವೃತ್ತಿಯೇನೊ, ಜೀವನವೇನೊ !" ಎನ್ನಲು ಆ ಮೌನಿಯು "ವೈದಿಕೋ ವಿಪ್ರಃ" ಎಂದನು. ಆದರಿಂದ ಅವರು ಚತುರ್ವೇದಪಾರಂಗತರೆಂತಲೂ ಅಧ್ಯಾಪನ, ಯಾಜನ, ದಾನಪ್ರತಿಗ್ರಹ-ಇವುಗಳಿಂದಲೇ ಜೀವನಮಾಡುವವರೆಂತಲೂ ಕವಿತ್ವಾದಿ ಪರಿಚಯರಹಿತರೆಂತಲೂ ಕಾಳಿದಾಸನು ನಿಶ್ಚಯಿಸಿದನು. ತಿರುಗಿ ''ಈಗ ರಾಜಾನುಗ್ರಹವೇಕೆ?'' ಎಂದು ಕೇಳಲು ''ಕನ್ಯಾ ವಿವಾಹಾರ್ಥಮ್'' ಎಂದು ಮೌನಿಯು ನುಡಿದನು. ಅದನ್ನು ಕೇಳಿ ಮಹಾಕವಿಯು ತನ್ನ ಮನಸ್ಸಿನಲ್ಲಿ ಒಂದು ವಿಚಿತ್ರವಾದ ಭಾವನೆಯನ್ನು ಸೃಷ್ಟಿಸಿಕೊಂಡನು. ಆಸ್ಥಾನವು ಸಮೀಪಿಸಲು ಇಬ್ಬರೂ ಮೇನಾದಿಂದ ಇಳಿದು ಭೋಜರಾಜನ ದರ್ಬಾರು ಮಂಟಪವನ್ನು ಪ್ರವೇಶಿಸಿದರು.

ತರುವಾಯ ಕಾಳಿದಾಸನು ಮಹಾರಾಜನಿಗೆ ಆಶೀರ್ವದಿಸಿ ತನ್ನ ಸ್ಥಾನದಲ್ಲಿ ಕೂರದೆ ಒಂದು ಕ್ಷಣ ಹಾಗೆಯೇ ನಿಂತನು. ಮಹಾರಾಜನು ಮಹಾ

ಕವಿಯ ಭಾವವನ್ನರಿತು "ಎಲೈ ಮಿತ್ರನೆ, ನಿನ್ನ ಇಷ್ಟಾರ್ಥವೇನು ? ಈ ಮಹನೀಯರು ಯಾರು ?'' ಎಂದು ಕೇಳಿದನು. ಕಾಳಿದಾಸನು ''ಇವರು ನನ್ನ ಗುರುಗಳು, ಬಹುಕಾಲದ ಮೇಲೆ ನನಗೆ ದರ್ಶನಕೊಟ್ಟಿದ್ದಾರೆ. ತಮಗೆ ಅವರ ಅನುಗ್ರಹವು ಉಂಟಾಗಬೇಕೆಂದು ಅವರನ್ನು ಸನ್ನಿಧಾನಕ್ಕೆ ಕರೆ ತಂದೆನು" ಎನ್ನಲು, ಮಹಾರಾಜನು ಕೂಡಲೆ ಸಿಂಹಾಸನವನ್ನು ಬಿಟ್ಟೆಳಿದು ಮೌನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದನು. ಬ್ರಾಹ್ಮಣನು ''ತ್ರಿಪೀಡಾಸ್ತು" ಎಂದು ಆಶೀರ್ವಾದಮಾಡಿದನು. ಆಗ ರಾಜನಿಗೆ ಏನೂ ತೋಚದೆ ಇದ್ದು ಕಾಳಿದಾಸನ ಮುಖವನ್ನು ನೋಡಲು ಆತನು "ಮಹಾಸ್ವಾಮಿ, ತಮಗೆ ಅತ್ಯುತ್ಕೃಷ್ಟವಾದ ಸುಖವು ಅನುಗ್ರಹಿಸಲ್ಪಟ್ಟಿತು. ಸಭೆಯಲ್ಲಿ ವಿದ್ವಚ್ಛಿರೋಮಣಿಗಳಿಂದಲೂ, ಊಟದಲ್ಲಿ ಮಕ್ಕಳಿಂದಲೂ ಶಯನದಲ್ಲಿ ಸ್ವಕಾಂತೆಯಿಂದಲೂ ನಿತ್ಯವಾಗಿ ತಾವು ಪೀಡಿಸಲ್ಪಡಬೇಕು-ಎಂದು ಐಹಿಕಸುಖವನ್ನೆಲ್ಲ ತಮಗೆ ಸೂರೆಗೊಟ್ಟಿದ್ದಾರೆ. ಇದಕ್ಕಿಂತಲೂ ಹೆಚ್ಚಾದ ಅನುಗ್ರಹವೇನು ?'' ಎಂದನು. ಕವಿಯ ವ್ಯಾಖ್ಯಾನವನ್ನು ಮಹಾರಾಜನು ಕೇಳಿ ಸಂತೋಷದಿಂದ ಮೌನಿಗೆ ಉಚ್ಚಾಸನವನ್ನು ಕೊಟ್ಟು ತಾನು ತನ್ನ ಆಸನದಲ್ಲಿ ಕುಳಿತನು. ಆಗ ಅತಿವಿವೇಕಿಯಾದ್ದರಿಂದ ಮಹಾರಾಜನಿಗೆ ಹೀಗೆ ಆಲೋಚನೆ ಉಂಟಾಯಿತು : 'ಈ ಮಹಾಕವಿಯ ಗುರುವಿನಿಂದ ಐಹಿಕಸುಖವನ್ನು ಪಡೆಯುವದು ಏನು ಅತಿಶಯ ! ಅಂತ್ಯವಿಲ್ಲದ ಮೋಕ್ಷಸುಖವನ್ನೇ ಇವರ ಅನುಗ್ರಹದಿಂದ ಪಡೆಯಬಹುದಲ್ಲವೆ ? ಹಿಂದೆ ಜನಕರಾಯನಿಗೆ ಯಾಜ್ಞವಲ್ಕ್ಯರು ಸಿಕ್ಕಿದ ಹಾಗೆ ಇವರು ನನಗೆ ಲಭ್ಯರಾಗಿರುವರು.' ಈ ಬಗೆಯಲ್ಲಿ ಹೊಸ ಭಾವನೆಯನ್ನು ಹೊಂದಿದ ರಾಜನು ಕವಿಯನ್ನು ನೋಡಿ 'ಮಿತ್ರನೆ, ಇವರಿಂದ ನಾನು ಆತ್ಮಜ್ಞಾನವನ್ನು ಪಡೆದು ನಿತ್ಯಸುಖವನ್ನನುಭವಿಸಬೇಕೆಂದು ಅಪೇಕ್ಷಿಸುತ್ತೇನೆ. ಈ ನನ್ನ ಮನೋರಥವು ನಿನ್ನಿಂದ ನೆರವೇರಬೇಕು' ಎಂದನು. ಆಗ ಮಹಾಕವಿಯು ನಿರ್ಭೀತನಾಗಿ ಹೀಗೆಂದನು : "ಮಹಾಸ್ವಾಮಿ, ಗುರುಗಳಲ್ಲಿ ವಿಚಾರಮಾಡತಕ್ಕ ದೇಶಕಾಲರೀತಿಗಳು ಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟಿವೆ. 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' (ದೊಡ್ಡವರಿಗೆ ನಮಸ್ಕರಿಸುವದು, ಅವರಲ್ಲಿ ತತ್ತ್ವವಿಚಾರಮಾಡುವದು, ಅವರ ಸೇವೆಯನ್ನು ಮಾಡುವದು-ಈ ಕ್ರಮದಿಂದ ತತ್ತ್ವವನ್ನು ತಿಳಿದು

(ಕೊಳ್ಳಬೇಕು). ಆದ್ದರಿಂದ ನಾಳೆ ಪ್ರಾತಃಕಾಲದಲ್ಲಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಯುಕ್ತವಾದ ಪರಿಕರಗಳೊಡನೆ ಗುರುಗಳಿರುವ ಸ್ಥಾನಕ್ಕೆ ಶಿಷ್ಯವೃತ್ತಿಯಿಂದ ಬಂದು ದರ್ಶನಮಾಡಿದರೆ ತಮ್ಮ ಅಭೀಷ್ಟವು ಸಿದ್ಧಿಯಾಗುವದು' ಎಂದು ಉತ್ತರಕೊಟ್ಟನು.

ಮಹಾರಾಜನು ಅದಕ್ಕೆ ಸಮ್ಮತಿಸಿ ತಾನು ತನ್ನ ಪತ್ನಿಯೊಡನೆ ಮರುದಿನ ಅನೇಕ ವಸ್ತ್ರಾಭರಣಗಳ ಸಂಗಡ ಯಥೇಷ್ಟವಾಗಿ ದ್ರವ್ಯವನ್ನು ತೆಗೆದುಕೊಂಡು ಕಾಳಿದಾಸನ ಮನೆಯಲ್ಲಿ ಗುರುಗಳ ಮುಂದೆ ಎಲ್ಲವನ್ನೂ ಒಪ್ಪಿಸಿ ಸಾಷ್ಟಾಂಗನಮಸ್ಕಾರಮಾಡಿ ಅತ್ಯಂತಕುತೂಹಲಪೂರ್ವಕವಾಗಿ ಕಾಳಿದಾಸನಿಂದ ಕೊಡಲ್ಪಟ್ಟ ಆಸನದಲ್ಲಿ ಕುಳಿತನು. ಮಹಾಕವಿಯು ಇದನ್ನೆಲ್ಲ ನೋಡಿ ಸಂತೋಷದಿಂದ 'ಮಹಾಪ್ರಭೂ, ತಮ್ಮ ಭಕ್ತಿಗೆ ನಮ್ಮ ಗುರುಗಳು ಪರವಶರಾದರು. ಇನ್ನು ಬ್ರಹ್ಮವಿಚಾರಮಾಡಬೇಕಾದರೆ ತಮಗೆ ಇಷ್ಟವಾದ ಪ್ರಶ್ನೆಗಳನ್ನು ಮಾಡಬಹುದು. ಗುರುಗಳ ಉತ್ತರಗಳನ್ನು ನಾನೇ ವಿವರಿಸುವೆನು' ಎಂದನು.

ಭೋಜ : ಗುರುಗಳೆ, ಮೋಕ್ಷಕ್ಕೆ ಮುಖ್ಯಸಾಧನವು ಯಾವದು ?

ಮೌನಿ : 'ಜ್ಞಾನಾದಕೃತಃ' (ಮುಂ. ೧-೨-೧೨).

ಕಾಳಿ : ಅಂದರೆ ''ನಾಸ್ತ್ಯಕೃತಃ ಕೃತೇನ" (ಕರ್ಮದಿಂದ ಮೋಕ್ಷವಿಲ್ಲ) 'ನಾನ್ಯಃ ಪಂಥಾ ವಿದ್ಯತೇಽಯನಾಯ' (ಜ್ಞಾನವನ್ನು ಬಿಟ್ಟು ಮೋಕ್ಷವನ್ನು ಪಡೆಯಲು ಮಾರ್ಗಾಂತರವಿಲ್ಲ) ಎಂಬ ಶ್ರುತಿಗಳ ಪ್ರಮಾಣದಿಂದ ಜ್ಞಾನವೇ ಮುಖ್ಯಸಾಧನವಾಯಿತು. ಅಜ್ಞಾನದಿಂದ ಸಂಸಾರವಾಗಿರುವಲ್ಲಿ ಜ್ಞಾನದಿಂದ ತನ್ನಾಶವೂ ನ್ಯಾಯವಲ್ಲವೆ ?

ಭೋಜ : ಜ್ಞಾನವೆಂದರೇನು ?

ಮೌನಿ : ಸತ್ಯಂ ಮಿಥ್ಯಾ.

ಕಾಳಿ : ಅಂದರೆ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬುದೇ ಜ್ಞಾನದ ಸ್ವರೂಪವು.

ಭೋಜ : ಈ ವಿಷಯದಲ್ಲಿ ಪ್ರಮಾಣವೇನು ?

ಮೌನಿ : ಶ್ರುತ್ಯನುಭವಾ.

ಕಾಳಿ : ಅಂದರೆ ದಶೋಪನಿಷತ್ತುಗಳೂ ನಮ್ಮ ಅನುಭವವೂ ಯಾವ ವಿರೋಧವೂ ಇಲ್ಲದೆ ಈ ತತ್ತ್ವವನ್ನು ಹೊರಪಡಿಸುತ್ತವೆ.

ಭೋಜ : ಹಾಗಾದರೆ ಕ್ರಮವಾಗಿ ಉಪನಿಷತ್ತುಗಳ ತಾತ್ಪರ್ಯವನ್ನು ತಿಳಿಸಬೇಕು.

ಮೌನಿ : "ಈಟ್, ಅಸ್ಮಿ" (ಈ. ೧, ೧೬).

ಕಾಳಿ ; ಅಂದರೆ ಈಶಾವಾಸ್ಯದಲ್ಲಿ 'ಈಶಾವಾಸ್ಯಮಿದಗ್ಂ ಸರ್ವಂ' ಎಂಬುದರಿಂದ ಜಗತ್ತೆಲ್ಲವೂ ಬ್ರಹ್ಮದಿಂದ ಮುಚ್ಚಲ್ಪಡಬೇಕೆಂದು, ಅಂದರೆ ಬ್ರಹ್ಮವಾಗಿಯೇ ಗ್ರಹಿಸಲ್ಪಡಬೇಕೆಂದು, ಮೊದಲನೆಯ ಮಂತ್ರದಲ್ಲಿಯೂ "ಯೋಽಸಾವಸೌ ಪುರುಷಃ ಸೋಽಹಮಸ್ಮಿ" ಅಂದರೆ 'ಈ ಸೂರ್ಯನಲ್ಲಿ ಯಾವ ಪುರುಷನಿರುವನೋ ಅವನೇ ನಾನು'[1] ಎಂದು ವಾಕ್ಯಶೇಷದಲ್ಲಿಯೂ ಹೇಳಲ್ಪಡುವದರಿಂದ ಈ ಶ್ರುತಿಯು ಸರ್ವವೂ ಬ್ರಹ್ಮವೆಂದು ಬ್ರಹ್ಮಾತ್ಮೈಕ್ಯವನ್ನು ಬೋಧಿಸುತ್ತದೆ.

ಭೋಜ : ಈ ಉಪನಿಷತ್ತಿನಲ್ಲಿ 'ಈಟ್', 'ಜಗತ್ತು', 'ಕರ್ಮ', 'ಅವಿದ್ಯಾ'– ಮುಂತಾದ ಭೇದಪ್ರತಿಪಾದಕವಾದ ಮಾತುಗಳು ಇಲ್ಲವೆ ?

ಮೌನಿ : 'ದೃಷ್ಟಾನುವಾದರೂಪಂ ದ್ವೈತಮ್'

ಕಾಳಿ : ಅಂದರೆ ಯಾವ ಶಬ್ದಗಳಿಂದ ಭೇದವು ಸೂಚಿಸಲ್ಪಡುತ್ತದೆಯೋ ಅವುಗಳಿಂದ ವೇದವು ವ್ಯವಹಾರದಲ್ಲಿ ನೋಡಲ್ಪಡುವ ಭೇದವನ್ನು ತಾನು ಮೊದಲು ಹೇಳಿ, ಮುಂದೆ ಅದನ್ನು ನಿರಾಕರಿಸಿ ಪರಮಾರ್ಥಜ್ಞಾನವನ್ನುಂಟುಮಾಡುವದಕ್ಕೆ ಆ ಶಬ್ದಗಳನ್ನೇ ಸಾಧನವಾಗಿ ಉಪಯೋಗಿಸುತ್ತದೆ. ಈ ಆಕ್ಷೇಪಣೆಯು ಶಬ್ದಸಾಮಾನ್ಯಕ್ಕೆ ಬರುವದರಿಂದ ತಾತ್ಪರ್ಯವನ್ನು ಅನುಭವದಿಂದ ಗ್ರಹಿಸುವವರು ಈ ದೃಷ್ಟಾನುವಾದದಿಂದ ಭ್ರಮಿಸಕೂಡದು.

---

1. ಭಾಷ್ಯದ ಪ್ರಕಾರ ಈ ವಾಕ್ಯವು ಉಪಾಸನೆಗೆ ಸೇರಿದ್ದಾದರೂ ನಮ್ಮ ಶರೀರದಲ್ಲಿ ಹೊಕ್ಕು ಹೃದಯದಲ್ಲಿರುವವನೂ ಆದಿತ್ಯನಲ್ಲಿರುವವನೂ ಒಬ್ಬನೇ ಪರಮಾತ್ಮನು ಎಂಬ ತೈತ್ತಿರೀಯವೇ (೩–೮) ಮುಂತಾದ ಉಪನಿಷತ್ತುಗಳಲ್ಲಿರುವ ಪರಮಾರ್ಥತತ್ತ್ವದ ಆಧಾರದಿಂದಲೇ ಇಲ್ಲಿ ಏಕತ್ವಭಾವನೆಯನ್ನು ವಿಧಿಸಿರುತ್ತದೆ.

ಭೋಜ : ಹಾಗಾದರೆ ಮುಂದೆ ಕೇನೋಪನಿಷತ್ತಿನ ವಿವರಣ ವಾಗಲಿ !

ಮೌನಿ : "ಅನ್ಯದೇವ" (೧–೧–೪).

ಕಾಳಿ : ಅಂದರೆ 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' ಎಂಬ ಶ್ರುತಿಯಿಂದ ಈ ಆತ್ಮನು ಜ್ಞಾತವಾದ ಅಥವಾ ಅಜ್ಞಾತವಾದ–ಎರಡು ಬಗೆಯ ವಿಷಯಗಳಿಗೂ ಬೇರಾದವನು ಎಂದು ತಿಳಿಯತಕ್ಕದ್ದು ; ಏಕೆಂದರೆ ಆತ್ಮನು ಕೇವಲ ಸಾಕ್ಷಿಸ್ವರೂಪನಾದ್ದರಿಂದ ಅವನನ್ನು ತಿಳಿದ ವಿಷಯವೆಂದಾಗಲಿ ತಿಳಿಯದ ವಿಷಯವೆಂದಾಗಲಿ ಹೇಳುವದು ತಪ್ಪು. ಮತ್ತು ಸಾಕ್ಷಿಯ ಸ್ವರೂಪದಿಂದಲೇ ಬಹುತ್ವವು ಖಂಡಿಸಲ್ಪಡುವದು ; ಏಕೆಂದರೆ ಸಾಕ್ಷಿಯಲ್ಲಿ ಸಂಖ್ಯಾದಿಗಳು ಪ್ರವೇಶಿಸಲಾರವು.

ಭೋಜ : ಹಾಗಾದರೆ ವಿಷಯಕೋಟಿಯು ಅಥವಾ ಪ್ರಪಂಚದ ಗತಿಯೇನು ?

ಮೌನಿ : 'ಮಾಯಾಮಾತ್ರಮ್' (ಮಾಂ.ಕಾ. ೧–೧೭).

ಕಾಳಿ : ವಿಷಯವು ಕೂಡ ಜ್ಞಾನಕ್ಕೆ[1] ಸಂಬಂಧಪಟ್ಟೇ ತಾನು ಉಳಿದುಕೊಂಡಿರುವದಾದ್ದರಿಂದ ಸ್ವತಂತ್ರವಾಗಿ ಇರಲರಿಯದು. ಆದ್ದರಿಂದ ಅದು ಸಾಕ್ಷಿಯ ಹಾಗೆ ಸತ್ಯವಲ್ಲ. ಮತ್ತು ತಾನುತಾನೇ ಇರುವದಕ್ಕೆ ಅದಕ್ಕೆ ಸ್ವಾತಂತ್ರ್ಯವಿಲ್ಲ ; ಆದಾಗ್ಯೂ ತೋರುತ್ತಲಿದೆ. ಇದನ್ನೇ ಆತ್ಮನ 'ಮಾಯೆ', 'ಶಕ್ತಿ'– ಎಂಬುದಾಗಿ ಕರೆಯುವರು.

ಭೋಜ : ಈ ಮಾಯೆಗೆ ಕಾರಣವೇನಿರಬಹುದೊ !

ಮೌನಿ : 'ಅವಿದ್ಯಕಮಧ್ಯಸ್ತಮ್'

ಕಾಳಿ : ಎರಡನೆಯ ವಸ್ತುವಿನ ಇರುವಿಕೆಯನ್ನು ಸ್ವಭಾವದಿಂದಲೇ ಸಹಿಸಲಾರದ ಆತ್ಮನಲ್ಲಿ ಈ ಮಾಯೆಯನ್ನು ನಾವು ನಮ್ಮ ಅಜ್ಞಾನದಿಂದ ಕಲ್ಪಿಸುವೆವು. ಕಾರ್ಯಕಾರಣತ್ವಾದಿಸಂಬಂಧಗಳು ಮಾಯೆಯಿಂದ ತೋರುವ ದ್ವೈತದಲ್ಲಿಯೇ ಕಂಡುಬರುವವು. ಆದ್ದರಿಂದ ಮಾಯೆಗೆ ನಮ್ಮ

---

1. ಇಲ್ಲಿ ಸಾಕ್ಷಿಚೈತನ್ಯವನ್ನೇ ಜ್ಞಾನವೆಂಬ ಶಬ್ದದಿಂದ ಗ್ರಹಿಸಬೇಕು ; ಅಂತಃಕರಣದ ವೃತ್ತಿಯನ್ನಲ್ಲ.

ಅಜ್ಞಾನವನ್ನು ಬಿಟ್ಟು ಬೇರೆಯ ಕಾರಣವೆಲ್ಲಿಯದು ? ಆತ್ಮೈಕ್ಯಜ್ಞಾನವು ಉಂಟಾಗುವಲ್ಲಿ ಎರಡನೆಯ ವಸ್ತುವಿನ ಸೋಂಕೇ ಆತ್ಮನಿಗೆ ಇಲ್ಲವೆಂದು ಗೊತ್ತಾಗುವದರಿಂದ ಮಾಯೆಯೂ ನಿರ್ಮೂಲವಾಗುವದು.

ಭೋಜ : ಮುಂದೆ ಕಠೋಪನ್ಯಾಸವಾಗಲಿ !

ಮೌನಿ : 'ಯೇನಾನುಪಶ್ಯತಿ' (ಕ. ೨-೧-೪).

ಕಾಳಿ : "ಸ್ವಪ್ನಾನ್ತಂ ಜಾಗರಿತಾನ್ತಂ ಚ ಉಭೌ ಯೇನಾನುಪಶ್ಯತಿ | ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ||' ಎಂಬೀ ಮಂತ್ರದಲ್ಲಿ ಯಾವ ಪರಮಾತ್ಮನಾಗಿ ತಾನು ಇರುವದರಿಂದ ಸ್ವಪ್ನಜಾಗ್ರದ್ವಿಷಯಗಳನ್ನು ಜೀವನು ಅರಿಯುವನೋ ಆ ಪರಮಾತ್ಮನೇ ತಾನೆಂದು ಅರಿತು ಪರಮಾತ್ಮನ ಮಾಹಾತ್ಮ್ಯವನ್ನೂ ವಿಭುತ್ವವನ್ನೂ ಜೀವನು ಪಡೆಯುವನು. ಆಗ ಈ ಆತ್ಮಜ್ಞಾನದ ಬಲದಿಂದ ಶೋಕವನ್ನು ಗೆಲ್ಲುವನು.

ಭೋಜ : ನಾನೇ ಅಲ್ಲವೆ ಎಚ್ಚರಕನಸುಗಳನ್ನು ಪಡೆಯುವವನು ? ಇಲ್ಲಿ ಪರಮಾತ್ಮನ ವಿಷಯವು ಪ್ರಕೃತವಲ್ಲವಷ್ಟೆ ? ಹೀಗಿರಲಾಗಿ ಐಕ್ಯ ಜ್ಞಾನವುಂಟಾಗುವದಕ್ಕೆ ಅವಕಾಶವೆಲ್ಲಿ ?

ಮೌನಿ : 'ಅತ ಏವ'

ಕಾಳಿ : ಈ ಅವಸ್ಥಾವಿಚಾರದ ಸ್ವಭಾವದಿಂದಲೇ ಪರಮಾತ್ಮವಸ್ತು ನಿಷ್ಪನ್ನವಾಗುವದು, ಹೇಗೆಂದರೆ, ಜಾಗ್ರತ್ತನ್ನು ನೋಡುವ ಜೀವನಿಗೆ 'ವಿಶ್ವ'ನೆಂದು ಹೆಸರು.[1] ಈ ವಿಶ್ವನಿಗೆ ಸ್ವಪ್ನವನ್ನು ಸಾಕ್ಷಾತ್ ನೋಡುವ ಶಕ್ತಿ ಇಲ್ಲ. ಹಾಗೆಯೇ ಸ್ವಪ್ನವನ್ನು ಅನುಭವಿಸುವ ಜೀವನಿಗೆ 'ತೈಜಸ'ನೆಂದು ಹೆಸರು. ಈ ತೈಜಸನು ಜಾಗ್ರದನುಭವವನ್ನು ನೇರಾಗಿ ಪಡೆಯಲು ಶಕ್ತನಲ್ಲ. ಆದರೆ ಈಗ ತಾವು ಅಪ್ಪಣೆಕೊಟ್ಟಂತೆ ಸ್ವಪ್ನಜಾಗ್ರತ್ತುಗಳನ್ನು ಅನುಭವಿಸುವವನು ನಾನೇ ಅಲ್ಲವೆ? ಈ ನಾನು ವಿಶ್ವನೂ ಅಲ್ಲ, ತೈಜಸನೂ

1. ಇದು ರೂಢಿಯಲ್ಲಿರುವ ಈಗಿನ ವೇದಾಂತಿಗಳ ಪರಿಭಾಷೆಯನ್ನನುಸರಿಸಿ ಹೇಳಿದ್ದು. ನಿಜವಾಗಿ ವಿಶ್ವ, ವೈಶ್ವಾನರ ಎಂಬಿವೆರಡೂ ಜಾಗ್ರದವಸ್ಥೋಪಹಿತನಾದ ಸಾಕ್ಷಿಯ ಹೆಸರುಗಳು. ಜಾಗ್ರತ್ತನ್ನು ಅನುಭವಿಸುವ ಆತ್ಮನನ್ನು ಶಾರೀರ ಅಥವಾ ವಿಜ್ಞಾನಾತ್ಮ– ಎಂದು ಕರೆಯುವದೇ ಯುಕ್ತ.

ಅಲ್ಲ; ಆದ್ದರಿಂದ ಪರಮಾತ್ಮನೇ ಆಗಬೇಕು. ಮತ್ತು ಈ ನನಗೆ ಆ ಇಬ್ಬರ ದೇಹ, ಮನಸ್ಸು, ಇಂದ್ರಿಯಗಳು, ಅವುಗಳ ವಿಷಯಗಳು- ಇವು ಯಾವುಗಳ ಮುಸಕೂ ತಗಲಬಾರದು. ಹಾಗಿಲ್ಲದಿದ್ದರೆ ಈ ಎರಡು ಅವಸ್ಥೆಗಳಿಗೂ ನಾನು ಹೇಗೆ ಸಾಕ್ಷಿಯಾಗುವೆನು ? ಹಾಗೆ ಸಾಕ್ಷಿಯಾಗದಿದ್ದರೆ 'ನಾನೇ ಸ್ವಪ್ನವನ್ನು ಕಂಡೆನು ? ಈಗ ಎಚ್ಚತ್ತಿದೇನೆ'- ಎಂಬ ಅನುಭವವು ಹೇಗೆ ಉಂಟಾದೀತು ? ತಮ್ಮ ಮಾತಿನಿಂದ ಆ ಅನುಭವವು ಇರುವದಾಗಿ ತಿಳಿಯುತ್ತದೆಯಲ್ಲವೆ ? ಆದ್ದರಿಂದ 'ನಾನೇ ಪರಮಾತ್ಮನು' ಎಂದು ಸಿದ್ಧವಾಯಿತು. ಇದರ ಮೇಲೆ ಪರಮಾತ್ಮನ ಮಹತ್ವವೂ ವಿಭುತ್ವವೂ ಆನಂದವೂ ಜೀವನ ಸ್ವರೂಪವೇ ಎಂಬುದರಲ್ಲಿ ಅಡ್ಡಿಯೇನು ?

ಭೋಜ : ತಮ್ಮ ವ್ಯಾಖ್ಯಾನವು ಅಮೃತದಂತಿದೆ. ಮುಂದೆ ಪ್ರಶ್ನಕ್ಕೆ ಹೋಗೋಣ.

ಮೌನಿ : 'ಸರ್ವಃ ಸರ್ವಮ್' (ಪ್ರ. ೪-೧೦, ೧೧).

ಕಾಳಿ : 'ಸ ಸರ್ವಜ್ಞಃ ಸರ್ವೋ ಭವತಿ', 'ಸ ಸರ್ವಜ್ಞಃ ಸರ್ವಮೇವಾವಿವೇಶ' ಎಂದು ಶ್ರುತಿವಚನಗಳಿವೆ ಯಾವ ಉಪಾಧಿಯೂ ಇಲ್ಲದ ಅಕ್ಷರಾಖ್ಯನಾದ ಪರಮಾತ್ಮನನ್ನು ಯಾವನು ಅರಿತುಕೊಳ್ಳುವನೋ ಅವನು ಸರ್ವಜ್ಞನು, ಅವನು ಈ ಜ್ಞಾನದಿಂದ ಸರ್ವವೂ ಆಗುವನು-ಎಂದು ಮೊದಲನೆಯ ವಚನಕ್ಕೆ ಅರ್ಥ. ವಿಜ್ಞಾನಾತ್ಮನೂ ಅಗ್ನ್ಯಾದಿದೇವತೆಗಳೂ ಚಕ್ಷುರಾದೀಂದ್ರಿಯಗಳೂ ಮಹಾಭೂತಗಳೂ ಯಾವದರಲ್ಲಿ ಒಂದಾಗಿರುವವೋ ಆ ಅಕ್ಷರವನ್ನು ಅರಿತುಕೊಂಡಾತನು ಸರ್ವವನ್ನೂ ವ್ಯಾಪಿಸಿಕೊಳ್ಳುವನು- ಎಂದು ಎರಡನೆಯ ವಚನಕ್ಕೆ ಅರ್ಥ. ಸುಷುಪ್ತಿಯಲ್ಲಿ ಯಾವ ಸರ್ವೇಶ್ವರನು ಒಬ್ಬನೇ ಇರುವನೋ ಅವನೇ ಅಲ್ಲವೆ, ಜಾಗ್ರತ್ಸ್ವಪ್ನಗಳಲ್ಲಿ ನಾನು, ಪ್ರಪಂಚ- ಎಂಬ ದ್ವೈತವಾಗಿ ತೋರುವನು ? ಅಲ್ಲಿ ಆತ್ಮನಿಗೆ ಸ್ವರೂಪದಲ್ಲಿ ದ್ವೈತವು ಇಲ್ಲದೆ ಇರುವದರಿಂದ ಭಿನ್ನವಾಗಿ ತೋರುವ ಜೀವನೂ ಪ್ರಪಂಚವೂ ಆತನ ವಿಲಾಸವೇ ಹೊರತು ಬೇರಲ್ಲ- ಎಂದು ತಿಳಿಯಬೇಕು ; ಮತ್ತು ಸರ್ವಾವಸ್ಥೆಗಳಲ್ಲಿಯೂ ಸಾಕ್ಷಿರೂಪನಾಗಿ ಪರಮಾತ್ಮನು ಇದ್ದೇ ಇರುವದರಿಂದ ಅವನಲ್ಲಿ ಯಾವ ವಿಕಾರವನ್ನೂ

ಓಪ್ಪುವಹಾಗಿಲ್ಲ. ಆದ್ದರಿಂದ ಅಕ್ಷರನಾದ ಆತ್ಮನು ತನ್ನ ರೂಪದಲ್ಲಿಯೇ ಇದ್ದುಕೊಂಡು ಮಾಯೆಯಿಂದ ತನಗೆ ವಿಷಯವಾದ ಪ್ರಪಂಚರೂಪದಿಂದ ಲೂ ತೋರಿಕೊಳ್ಳುವನೆಂದು ನಿಶ್ಚಯಿಸಬೇಕು. ಈ ವೇದಾಂತದೃಷ್ಟಿಯುಳ್ಳ ಸರ್ವಜ್ಞನು ತಾನೇ ಸರ್ವವಾಗಿರುವನು.

ಭೋಜ : ಇದು ನನಗೆ ಮನಗಾಣುವಂತಿಲ್ಲವಲ್ಲ ! ಒಂದೇ ವಸ್ತುವು ಏಕಕಾಲದಲ್ಲಿ ವಿಕಾರವನ್ನು ಹೊಂದಿಯೂ ಹೊಂದದೆಯೂ ಇರುವದು ವಿರುದ್ಧವಲ್ಲವೆ ?

ಮೌನಿ : 'ತದುಕ್ತಮ್'

ಕಾಳಿ : ತಮ್ಮ ಆಕ್ಷೇಪವು ನ್ಯಾಯವಾಗಿಯೇ ಇರುವದು. ಆದರೆ ಅಂಥ ವಿರುದ್ಧಧರ್ಮಗಳನ್ನು ನಾವು ಆತ್ಮನಲ್ಲಿ ಹೇಳುವದಿಲ್ಲ. ವಿಕಾರವೆಲ್ಲ ತೋರಿಕೆ, ಮಾಯೆ-ಎಂದು ಮೊದಲೇ ಹೇಳಿದ್ದೇವೆ. ಆದ್ದರಿಂದ ಪರಮಾತ್ಮ ನಿಗೆ ಅವಿಕಾರತ್ವವೇ ಸತ್ಯವು. ಆದರೆ ಈ ವಿಕಾರವನ್ನು ನೋಡುವ ಜೀವ ನಿಗೆ ಸರ್ವವೂ ಬ್ರಹ್ಮವೇ ಎಂಬ ಜ್ಞಾನವು ಬರುವದಕ್ಕೋಸ್ಕರ ಈ ರೀತಿ ಯಾಗಿ ಹೇಳಿದೆವು.

ಭೋಜ : ಈಗ ತಿಳಿಯಿತು. ಮುಂಡಕೋಪನ್ಯಾಸವಾಗಲಿ.[1]

ಮೌನಿ : 'ಸಂಖ್ಯಾ ಗೌಣೀ' (ಮುಂ. ೩-೧-೧)

ಕಾಳಿ : 'ದ್ವಾ ಸುಪರ್ಣಾ ಸಯುಜಾ ಸಖಾಯಾ' -ಎಂಬ ಮಂತ್ರ ದಲ್ಲಿ, 'ಈ ಶರೀರವೆಂಬ ವೃಕ್ಷವನ್ನು ಆಶ್ರಯಿಸಿಕೊಂಡು ಎರಡು ಪಕ್ಷಿಗಳು -ಅಂದರೆ ಜೀವಾತ್ಮಪರಮಾತ್ಮರು ಇರುವರೆಂದು ಹೇಳಿದೆಯಾದ್ದರಿಂದ ಜೀವ ಪರಮರು ಭಿನ್ನರು ಎಂದು ತಿಳಿಯಕೂಡದು. ಇದು ಬರಿಯ ರೂಪಕವಾಗಿ ಇರುವದರಿಂದ ಸುಪರ್ಣಗಳನ್ನು (ಪಕ್ಷಿಗಳನ್ನು) ಲಕ್ಷಣೆಯಿಂದ ಆತ್ಮರು ಎಂದು ತಿಳಿದರೆ 'ದ್ವಾ' (ಎರಡು) ಎಂಬ ಶಬ್ದವನ್ನುಕೂಡ ಲಕ್ಷಣಾರ್ಥದಲ್ಲಿ ತೆಗೆದುಕೊಳ್ಳಬೇಕೇ ಹೊರತು ಮುಖ್ಯಾರ್ಥದಲ್ಲಿ ಅಂದರೆ ನಿಜವಾಗಿ ಎರಡು

1. ಮುಂಡಕವು ಮಂತ್ರವೆಂದೂ ಪ್ರಶ್ನವು ಬ್ರಾಹ್ಮಣವೆಂದೂ ಆಚಾರ್ಯರು ಪರಿಗಣಿಸಿರುತ್ತಾರಾದರೂ ರೂಢಿಯನ್ನನುಸರಿಸಿ ಪ್ರಶ್ನವಾದ ಮೇಲೆ ಮುಂಡಕವನ್ನು ಪ್ರಸ್ತಾಪಿಸಿದೆ ಎಂದು ತಿಳಿಯಬೇಕು.

ಎಂಬರ್ಥದಲ್ಲಿ ಗ್ರಹಿಸಕೂಡದು. ಏಕೆಂದರೆ ಮುಂದಿನ ಮಂತ್ರದಲ್ಲಿ 'ಜೀವನಾದ ಪಕ್ಷಿಯು ಕರ್ಮಫಲದಿಂದ ಶೋಕಮೋಹಗಳಲ್ಲಿ ಮಗ್ನನಾಗಿ ಯಾವಾಗ ಕರ್ಮಾತೀತನಾದ ಇತರ ಪಕ್ಷಿಯನ್ನು ಅಂದರೆ ಪರಮಾತ್ಮನನ್ನು ನೋಡುವನೋ ಆಗ ಶೋಕಮೋಹಗಳನ್ನು ದಾಟಿ ಪರಮಾತ್ಮನ ಮಹಿಮೆಯನ್ನು ಹೊಂದುವನು' –ಎಂದು ಹೇಳಿದೆ. ಜೀವಪರಮೇಶ್ವರರು ಅತ್ಯಂತ ಭಿನ್ನರಾದ ಪಕ್ಷದಲ್ಲಿ ಜೀವನು ಆನಂದರೂಪನಾದ ಪರಮಾತ್ಮನನ್ನು ನೋಡುವದರಿಂದಲೇ ಆತನ ಮಹಿಮೆಯನ್ನು ಎಂದಿಗೂ ಹೊಂದಲಾರನು. ಈ ಕಾರಣದಿಂದ ಜೀವನಿಗೆ ಆ ಜ್ಞಾನಾನಂದರೂಪನಾದ ಪರಮಾತ್ಮನೇ ಸ್ವರೂಪವಾಗಿ ಇರಬೇಕು. ಹೀಗೆ ಐಕ್ಯವೇ ಸಿದ್ಧವಾಯಿತು.

ಭೋಜ : ಇದು ಬಹುಕಷ್ಟವಾದ ಮಂತ್ರವೆಂದೂ ದ್ವೈತಪರವಾಗಿಯೇ ಇರುವದೆಂದೂ ಅನೇಕರ ಹಾಗೆ ನಾನೂ ಮೋಸಹೋಗಿದ್ದೆನು. ಈಗ ತಮ್ಮ ಅನುಗ್ರಹದಿಂದ ಈ ಸಂಶಯವು ಕತ್ತರಿಸಿಹೋಯಿತು. ಸರಿ, ಮುಂದೆ ಮಾಂಡೂಕ್ಯವಲ್ಲವೆ ?

ಮೌನಿ : ''ಉಪಶಮಂ ಚತುರ್ಥಮ್'' (ಮಾಂ. ೭).

ಕಾಳಿ : ''ಪ್ರಪಞ್ಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯನ್ತೇ' ಎಂದು ಮಂತ್ರವಿರುವದು. ಆತ್ಮನಲ್ಲಿ ಯಾವ ಪ್ರಪಂಚವೂ ಇಲ್ಲ–ಎಂಬುದೇ ಇದಕ್ಕೆ ತಾತ್ಪರ್ಯವು. 'ಚತುರ್ಥಂ' ನಾಲ್ಕನೆಯವನು ಎಂಬುದು ನಿಜವಾಗಿ ಸಂಖ್ಯೆಯನ್ನು ಹೇಳುವದಕ್ಕೆ ಬರಲಿಲ್ಲ ; ಮತ್ತೇನೆಂದರೆ ಅವಸ್ಥಾತ್ರಯದಲ್ಲಿ ಯಾವ ಮೂರು ಎಂಬುದು ವ್ಯಾವಹಾರಿಕವೋ, ಹಾಗೆಯೇ ಅದಕ್ಕೆ ಅಧಿಷ್ಠಾನಭೂತನಾದ ಆತ್ಮನು ವ್ಯಾವಹಾರಿಕವನ್ನು ಅನುಸರಿಸಿಯೇ ನಾಲ್ಕನೆಯವನು ಎಂದು ಕರೆಯಲ್ಪಡುತ್ತಾನೆ. ಆತ್ಮನು ಸರ್ವಾವಸ್ಥೆಗಳಲ್ಲಿಯೂ ಇರುವನೆಂಬುದನ್ನು ಯಾರೂ ಆಕ್ಷೇಪಿಸಲಾರರು. ''ಸ ಆತ್ಮಾ ಸ ವಿಜ್ಞೇಯಃ'' – ಎಂಬ ವಾಕ್ಯದಿಂದ, ಯಾವ ಆತ್ಮನಲ್ಲಿ ರಜ್ಜುವಿನಲ್ಲಿ ಸರ್ಪದ ಹಾಗೆ ಈ ಅವಸ್ಥಾತ್ರಯವು ಕಲ್ಪಿಸಲ್ಪಟ್ಟಿರುವದೋ ಆ ಆತ್ಮನೇ ಜ್ಞಾನವಿಷಯನು ಎಂದು ಹೇಳಿದ್ದರಿಂದ ಯಾವ ಸಂಖ್ಯೆಯ ವಿಶೇಷಣವೂ ನಿಷ್ಪ್ರಪಂಚನಾದ ಆತ್ಮನಲ್ಲಿ ಕೂಡುವದಿಲ್ಲ.

ಭೋಜ : ಇನ್ನು ತೈತ್ತಿರೀಯ.

ಮೌನಿ : "ಅನ್ತರಂ ಭಯಮ್" (ತೈ. ೨ ೭).

ಕಾಳಿ : 'ಯದಾ ಹ್ಯೇವೈಷ ಏತಸ್ಮಿನ್ ಉದರಮನ್ತರಂ ಕುರುತೇ ಅಥ ತಸ್ಯ ಭಯಂ ಭವತಿ' ಈ ಮಂತ್ರದಲ್ಲಿ 'ಏಕನಾಗಿರುವ ಆತ್ಮನಲ್ಲಿ ಒಂದಿಷ್ಟಾದರೂ ಭೇದವನ್ನು ಯಾರು ತಿಳಿಯುತ್ತಾರೋ ಅವರಿಗೆ ಶೋಕ ಮೋಹಗಳೆಂಬ ಭಯವುಂಟಾಗುತ್ತದೆ' ಎಂದು ಭೇದಜ್ಞಾನವನ್ನು ನಿಂದಿಸಿರುತ್ತದೆ.

ಭೋಜ : ಭೇದವನ್ನು ಕಾಣುವವನು ಒಬ್ಬನು, ಭೇದಜ್ಞಾನವೊಂದು, ಅದಕ್ಕೆ ವಿಷಯವೊಂದು–ಅಂತು ದ್ವೈತವು ಬಿಟ್ಟಿಲ್ಲವಲ್ಲವೆ !

ಮೌನಿ : 'ತದುಕ್ತಮ್'

ಕಾಳಿ : ನಾವು ಈ ಮುಂಚೆಯೇ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಿರಿ. ಶಬ್ದಾರ್ಥವ್ಯವಹಾರದಲ್ಲಿ ಭೇದವು ಎಂದಿಗೂ ತೋರದೆ ಇರಲಾರದು. ಆದಾಗ್ಯೂ ಅನುಭವರೂಪವಾದ ಐಕ್ಯವನ್ನು ನ್ಯಾಯದಿಂದ ಕಂಡುಕೊಂಡಮೇಲೆ ಈ ಕಾಣಬರುವ ದ್ವೈತವು ಸರ್ವಥಾ ಅಂಕಿಚಿತ್ಕರ, ಅಂದರೆ ಅದ್ವೈತಸ್ವರೂಪಕ್ಕೆ ಯಾವ ಹಾನಿಯನ್ನೂ ಉಂಟುಮಾಡಲಾರದು, ಆದ್ದರಿಂದಲೇ ಶ್ರುತಿಯಲ್ಲಿ 'ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ' (೨–೮) ಎಂದು ಆತ್ಮನೊಬ್ಬನೇ ಎಲ್ಲೆಲ್ಲಿಯೂ ಇರುವನೆಂದು ಹೇಳಿರುತ್ತದೆ.

ಭೋಜ : ವ್ಯವಹಾರವೆಂದರೇನು ? ಪರಮಾರ್ಥವೆಂದರೇನು ? ಇವೆರಡೂ ಸತ್ಯವಾದರೆ ದ್ವೈತವೇ ಅಲ್ಲವೆ, ಸಿದ್ಧಾಂತವಾಗುವದು ?

ಮೌನಿ : 'ಅಪ್ರತ್ಯಾಖ್ಯೇಯಸ್ವಭಾವಃ'

ಕಾಳಿ : ಯಾವದರ ವಿಷಯಕ್ಕೆ ಅದು ಯಾವದೊಂದು ಕಾಲದಲ್ಲಿಯೇ ಆಗಲಿ ಇಲ್ಲದಿರಬಹುದು ಎಂಬ ಜ್ಞಾನವು ಉಂಟಾಗುವದಕ್ಕೆ ಸಾಧ್ಯವಿಲ್ಲವೊ, ಅಂಥ ವಿಷಯವೇ ಪರಮಾರ್ಥವು. ಆತ್ಮನು ಅವಸ್ಥಾತ್ರಯದಲ್ಲಿಯೂ ಇದ್ದರೇ ಅಲ್ಲವೆ, ಮತ್ತೊಂದನ್ನು ಅನುಭವಿಸಬಹುದು ? ಆದ್ದರಿಂದ ಆತ್ಮನು ಪರಮಾರ್ಥವಸ್ತುವೆಂದೇ ತಿಳಿಯಲ್ಪಡಬೇಕು. ಅನಾತ್ಮವೋ

ಎಂದರೆ ಜಾಗ್ರತ್ಸ್ವಪ್ನಗಳಲ್ಲಿ ತೋರುವದು, ಸುಷುಪ್ತಿಯಲ್ಲಿ ಮಾಯವಾಗುವದು. ಆದ್ದರಿಂದ ಆತ್ಮನ ಅದ್ವಿತೀಯಸ್ವರೂಪವನ್ನು ಸುಷುಪ್ತಿಯಲ್ಲಿ ಅನುಭವಿಸಬಹುದು. ಒಂದವಸ್ಥೆಯಲ್ಲಿ ತೋರಿ ಇನ್ನೊಂದವಸ್ಥೆಯಲ್ಲಿ ಕಾಣಿಸಿಕೊಳ್ಳುಲು ಶಕ್ತಿಯಿಲ್ಲದ ಸ್ವಪ್ನಪ್ರಪಂಚವೇ ಆಗಲಿ, ಜಾಗ್ರತ್ಪ್ರಪಂಚವೇ ಆಗಲಿ, ತಾತ್ಕಾಲಿಕವ್ಯವಹಾರಕ್ಕೆ ಸಾಕಾದಷ್ಟು ಇರುವಿಕೆಯನ್ನು ಉಳ್ಳದ್ದೆಂದೆಣಿಸಬೇಕೇ ಹೊರತು ಆತ್ಮನ ಹಾಗೆ ಯಾವಾಗಲೂ ಇರುವಿಕೆಯನ್ನು ಅದು ಪಡೆಯಲಾರದು. ಆದ್ದರಿಂದ ಆತ್ಮನೊಬ್ಬನೇ ಪರಮಾರ್ಥ ; ಮಿಕ್ಕದ್ದೆಲ್ಲ ವ್ಯವಹಾರವಿಷಯವೇ, ಅಂದರೆ ಮನೋವಾಕ್ಕುಗಳಿಗೆ ಒಳಪಟ್ಟದ್ದೇ. ಆತ್ಮನು ತಾನಾಗಿಯೇ ಇರುವದರಿಂದ ಅವನು ಯಾವ ಪ್ರಮಾಣಕ್ಕೂ ವಿಷಯನಾಗದೆ ಸ್ವತಃಸಿದ್ಧನಾಗಿರುತ್ತಾನೆ.

ಭೋಜ : ಸುಷುಪ್ತಿಯಲ್ಲಿಯೂ ಅಜ್ಞಾನವಿರುವದಷ್ಟೆ. ಆಗ ಏಕತ್ವವನ್ನು ಹೇಗೆ ಸಾಧಿಸಲಾಗುವದು ?

ಮೌನಿ : 'ಸ್ವರೂಪಮಾತ್ರಮ್'

ಕಾಳಿ : "ಸುಷುಪ್ತಿಯಲ್ಲಿ ಅಜ್ಞಾನವಿದೆ" ಎಂಬುದು ಈಗ ಇರುವ ಅಜ್ಞಾನದ ಪ್ರತಿಬಿಂಬವೇ ಹೊರತು ಸ್ವತಃ ಅಲ್ಲಿ ಅಜ್ಞಾನವು ಎಷ್ಟುಮಾತ್ರಕ್ಕೂ ಇಲ್ಲ. ಅದು ಸ್ವರೂಪಾವಸ್ಥೆಯೇ ಹೊರತು ಬೇರೆಯಲ್ಲ.

ಭೋಜ : ಹಾಗಾದರೆ ತಿರುಗಿ ಜಾಗ್ರದಾದಿಗಳು ಬರುವದಕ್ಕೆ ಕಾರಣವೇನು ?

ಮೌನಿ : 'ಜ್ಞಾತೇಽದ್ವೈತಮ್'

ಕಾಳಿ : ತಾವು ಆತ್ಮನ ಏಕತ್ವವನ್ನು ಮನಗಂಡು ಕೇಳುವಿರಾ ? ಅಥವಾ ಪ್ರಪಂಚದಲ್ಲಿ ದೃಷ್ಟಿಯಿಟ್ಟುಕೊಂಡು ಕೇಳುವಿರಾ ? ಮೊದಲನೆಯ ಪಕ್ಷದಲ್ಲಿ ಏಕತ್ವಜಾನದಿಂದ ಕಡಿಮೆಯ ಜ್ಞಾನವೆಲ್ಲ ನಾಶಹೊಂದುವದರಿಂದ ಯಾವ ಪ್ರಶ್ನೆಗೂ ಅವಕಾಶವಿಲ್ಲ. ಎರಡನೆಯ ಪಕ್ಷದಲ್ಲಿ ಪ್ರಪಂಚವೂ ಅಜ್ಞಾನವೂ ಜೊತೆಯಲ್ಲಿಯೇ ಇರುವದರಿಂದ ಪ್ರಪಂಚ, ಅವಸ್ಥೆಗಳು, ಮುಂತಾದವು ಅಜ್ಞಾನಕಾರ್ಯವೆಂಬುದರಲ್ಲಿ ಸಂದೇಹವೇನು ? ಏಕತ್ವ

ಜ್ಞಾನದಿಂದ ಅಜ್ಞಾನವನ್ನು ಹೋಗಲಾಡಿಸಿಕೊಂಡರೆ ಪ್ರಶ್ನೆಗೆ ಅವಕಾಶ ಉಂಟೆ ?

ಭೋಜ : ಈಗ ಐತರೇಯಕ್ಕೆ ಹೋಗೋಣ.

ಮೌನಿ : "ಪ್ರಜ್ಞಾನಂ ಬ್ರಹ್ಮ" (ಐ. ೩–೧).

ಕಾಳಿ : 'ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ' ಎಂಬ ವಚನದಂತೆ ಲೋಕಕ್ಕೆಲ್ಲ ಪ್ರಜ್ಞಾನವೇ ಕಣ್ಣು, ಪ್ರಜ್ಞಾನವಿಲ್ಲದೆ ಯಾವದೊಂದನ್ನೂ ಅರಿಯುವದಕ್ಕೂ ಕೂಡ ಆಗದು ; ಉತ್ಪತ್ತಿಸ್ಥಿತಿಲಯಕಾಲಗಳಲ್ಲಿ ಪ್ರಜ್ಞಾನವನ್ನೇ ಎಲ್ಲವೂ ಅವಲಂಬಿಸಿಕೊಂಡಿರುತ್ತದೆ, ಈ ಪ್ರಜ್ಞಾನವೇ ಉಪಾಧಿಯದೆಸೆಯಿಂದ ಈಶ್ವರನೆಂದೂ ಬ್ರಹ್ಮನು ಮೊದಲುಗೊಂಡು ಸ್ತಂಬದವರೆಗಿನ ಜೀವರೆಂದೂ ಎನ್ನಿಸಿಕೊಳ್ಳುತ್ತಿರುವದು. ಈ ಪ್ರಜ್ಞಾನವೇ ಉಪನಿಷತ್ತಿನಲ್ಲಿ ಬ್ರಹ್ಮವೆಂದು ಕರೆಯಲ್ಪಟ್ಟಿರುವದು. ಆದ್ದರಿಂದ ಎಲ್ಲವೂ ಬ್ರಹ್ಮವೇ. ಅದೇ ನನ್ನ ಸ್ವರೂಪವು–ಎಂದು ವಿವೇಕಿಯು ಅರಿತುಕೊಳ್ಳಬೇಕು.

ಭೋಜ : ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ಅವುಗಳಲ್ಲಿ ನಾನಾವಿಧವಾದ ಸುಖದುಃಖಗಳನ್ನೂ ನಾನು ಅನುಭವಿಸುತ್ತಿರುವೆನೆಂಬುದು ಪ್ರತ್ಯಕ್ಷಸಿದ್ಧವಾಗಿದೆಯಲ್ಲ ! ಈ ಅನುಭವದಕ್ಕೇನು ಗತಿ ?

ಮೌನಿ : "ತ್ರಯಃ ಸ್ವಪ್ನಾಃ" (೧–೩)

ಕಾಳಿ : ಇಲ್ಲಿ 'ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾಃ' ಎಂಬ ವಚನದಲ್ಲಿ ಹೇಳಿರುವದನ್ನು ನೆನಪಿಡಬೇಕು. ಪರಮಾತ್ಮನು ಈ ಜಗತ್ತನ್ನೆಲ್ಲ ಸೃಷ್ಟಿಮಾಡಿ ಜೀವರೂಪದಿಂದ ಇದರೊಳಗೆ ಪ್ರವೇಶಮಾಡಿರುವನೆಂದು ಶ್ರುತಿಯು ಹೇಳಿರುತ್ತದೆ. ಆತನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳಲ್ಲಿ ಇರುವಂತೆಯೂ ಅವುಗಳಲ್ಲಿ ಸುಖವನ್ನು ಅನುಭವಿಸುವಂತೆಯೂ ತೋರುತ್ತಿದ್ದರೂ ಪರಮಾರ್ಥದೃಷ್ಟಿಯಿಂದ ನೋಡಿದರೆ ಈ ಮೂರು ಅವಸ್ಥೆಗಳೂ ಇವುಗಳಲ್ಲಿ ಕಾಣಬರುವ ಪ್ರಪಂಚವೂ ಅದರಿಂದಾಗುವ ಸುಖದುಃಖ

ಗಳೂ ಎಲ್ಲವೂ ಮಾಯಾಮಾತ್ರವಾಗಿರುವು. ಈ ಮೂರು ಅವಸ್ಥೆಗಳೂ ಮೂರು ಬಗೆಯ ಸ್ವಪ್ನಗಳು, ಅವು ಎಂದಿಗೂ ಪರಮಾರ್ಥವಲ್ಲ.

ಭೋಜ : ಇನ್ನು ಛಾಂದೋಗ್ಯವಾಗಲಿ.

ಮೌನಿ : 'ತದಸಿ'

ಕಾಳಿ : ಅಂದರೆ ' ತತ್ ತ್ವಮಸಿ ' (೬ನೆಯ ಅಧ್ಯಾಯ) ಎಂಬ ಮಹಾವಾಕ್ಯದಿಂದ 'ತ್ವಮ್' ಎಂಬ ವಿಷಯರೂಪವಾದ ಪ್ರಪಂಚವೂ ವಿಷಯಿರೂಪನಾದ ಜೀವನೂ ಸರ್ವವೂ ತತ್' ಅಂದರೆ ಬ್ರಹ್ಮವೇ, ಬ್ರಹ್ಮ ವನ್ನು ಬಿಟ್ಟು, ಅದು ಬೇರೆಯಾಗಿ ಇದೆ ಎಂದಾಗಲಿ ಇಲ್ಲವೆಂದಾಗಲಿ ಹೇಳು ವದಕ್ಕೆ ಸಾಧ್ಯವಿಲ್ಲ.

ಭೋಜ : ಇಲ್ಲಿ ತತ್, ತ್ವಮ್-ಎಂಬ ಪದಗಳಿಗೆ ವಿರುದ್ಧಾರ್ಥಗಳು ಇದಾಗ್ಯೂ ಐಕ್ಯವನ್ನು ಹೇಳುವ ಹಾಗೆ ತೋರುತ್ತದೆ. ಆದರೆ ಈ ವಿರೋಧವನ್ನು ಒಪ್ಪುವದು ಹೇಗೆ? 'ತಸ್ಮೈ ತ್ವಮಸಿ,' 'ತಸ್ಮಿನ್ ತ್ವಮಸಿ', 'ತದಿವ ತ್ವಮಸಿ'- ಮುಂತಾದ ರೀತಿಯಲ್ಲಿ ವಿರುದ್ಧಾರ್ಥವನ್ನು ಏತಕ್ಕೆ ಹೋಗಲಾಡಿಸಿಕೊಳ್ಳಬಾರದು ?

ಮೌನಿ : "ನ ಸಂಬಂಧಾಭಾವಾತ್"

ಕಾಳಿ : ಹಾಗೆ ಮಾಡಿದರೆ ನಿಃಶ್ರೇಯಸಸಾಧನವಾದ ಏಕತ್ವವನ್ನು ಅಗಲಿಸಿಕೊಂಡು, ನ್ಯಾಯವಿರುದ್ಧವಾದ ವ್ಯಾವಹಾರಿಕಸಂಬಂಧಗಳನ್ನು ಕಲ್ಪಿಸಿದಂತಾಗುವದು. ಹೇಗೆಂದರೆ 'ತಸ್ಮೈ ತ್ವಮಸಿ' (ಎಂದರೆ ಅವನಿ ಗೋಸ್ಕರ ನೀನಿದ್ದಿ) ಎಂದು ತಿಳಿಯುವದರಿಂದ ಅವರಿಬ್ಬರ ಸ್ವರೂಪವೇ ಆಗಲಿ, ಅವರಿಗಿರುವ ಸಂಬಂಧವೇ ಆಗಲಿ, ತಿಳಿದಹಾಗಾಗುವದಿಲ್ಲ ; ಮತ್ತು ಚಿತ್ಸ್ವರೂಪದಿಂದ ಇಬ್ಬರು ಆತ್ಮರಿಗೂ ಸಂಬಂಧವೇ ಆಗಲಿ, ಅಚಿದ್ರೂಪ ವಾದ ಜಗತ್ತಿಗೂ ಆತ್ಮರಿಗೂ ಸಂಬಂಧವೇ ಆಗಲಿ, ಅದನ್ನು ಏನೆಂದು ನಿರ್ವಚನಮಾಡಬಹುದು ? ಇಲ್ಲಿ ಸ್ವಾಮಿಭೃತ್ಯನ್ಯಾಯವಾಗಲಿ, ಆಧಾರಾ ಧೇಯನ್ಯಾಯವಾಗಲಿ, ಹೇತುಫಲನ್ಯಾಯವಾಗಲಿ, ಸಾಮ್ಯವೇ ಆಗಲಿ- ಎಂದಿಗೂ ಕೂಡಲಾರದು. ಆದ್ದರಿಂದ ಈ ದ್ವೈತವನ್ನು ಆಶ್ರಯಿಸುವ ಯಾವ ಭೇದವೂ ಸಂಬಂಧವೂ ಪರಮಾರ್ಥವಾದ ಸಾಕ್ಷಿರೂಪನಾದ ಮತ್ತು

ಏಕನಾದ ಆತ್ಮನಲ್ಲಿ ಯಾವ ರೀತಿಯಿಂದಲೂ ಸಂಭವಿಸಲಾರವು. 'ಅದು ನೀನು' ಎಂಬ ಶಬ್ದಾರ್ಥಗಳಲ್ಲಿ ತೋರುವ ವಿರೋಧವು ವ್ಯಾವಹಾರಿಕವಾಗಿ ಇರುವದರಿಂದ ಈ ದೋಷವು ಆತ್ಮೈಕ್ಯಜ್ಞಾನಕ್ಕೆ ಅಂಟದು. ದ್ವೈತವನ್ನು ಅವಲಂಬಿಸಿದರೆ ಅಪರಿಹಾರ್ಯವಾಗಿರತಕ್ಕ ವಿರುದ್ಧಭಾವಗಳಲ್ಲಿಯೇ ಬಿದ್ದು ಸಂಸಾರದಲ್ಲಿ ಮುಳುಗಿಹೋಗುವೆವು.

ಭೋಜ : ಮುಂದೆ ಬೃಹದಾರಣ್ಯಕವಲ್ಲವೆ?

ಮೌನಿ : 'ನ ತು ತದ್ದ್ವಿತೀಯಮ್' (ಬೃ. ೪-೩-೨೩).

ಕಾಳಿ : ಅಂದರೆ ಶ್ರುತಿಯು ಸರ್ವವೂ ಬ್ರಹ್ಮವೆಂದು ಉದ್ಘೋಷಿಸುತ್ತದೆ. 'ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ಪಶ್ಯೇತ್' (೪-೩-೨೩)- ಎಂಬ ವಾಕ್ಯವು ಆ ಬ್ರಹ್ಮಕ್ಕೆ ಎರಡನೆಯದು ಇಲ್ಲವೆಂದು ಹೇಳುವದರ ಮೂಲಕ ಸರ್ವಸಂಶಯವನ್ನೂ ನಾಶಮಾಡುತ್ತದೆ; ಎರಡನೆಯದು ಅಂದರೆ ಅಜ್ಞಾನ, ಮಾಯೆ, ಜಗತ್ತು-ಮುಂತಾದದ್ದು ಇರುವದಾಗಿದ್ದರೆ ಅದು ಸುಷುಪ್ತಿಯಲ್ಲಿ ತಿಳಿಯಲ್ಪಡಬೇಕಲ್ಲವೆ?-ಎಂದು ಸಾರುತ್ತದೆ.

ಭೋಜ : ಹಾಗಾದರೆ ಮಾಯೆಗೆ ಕಾರಣವೇನು ?

ಮೌನಿ : 'ತದುಕ್ತಮ್'

ಕಾಳಿ : ಇದು ಹಿಂದೆಯೇ ಹೇಳಲ್ಪಟ್ಟಿದೆ. ಮಾಯೆಗೆ ಅಜ್ಞಾನವನ್ನು ಬಿಟ್ಟು ಬೇರೆ ಕಾರಣವಿಲ್ಲ. ಮತ್ತು "ತ್ರಿಕಾಲದಲ್ಲಿಯೂ ಆತ್ಮನು ಒಬ್ಬನೇ ಇರುವನು" ಎಂಬ ಜ್ಞಾನವುಂಟಾದಮೇಲೆ ಮಾಯೆಯು ಕೂಡ ತ್ರಿಕಾಲದಲ್ಲಿಯೂ ಇಲ್ಲವೆಂದು ಸ್ಪಷ್ಟವಾಗುವದು. ತ್ರಿಕಾಲದಲ್ಲಿಯೂ ಇಲ್ಲದ ಪದಾರ್ಥಕ್ಕೆ ಕಾರಣವನ್ನು ಕೇಳುವದು ವಿವೇಕವೆ ? ಕಾರಣಾದಿಗಳೂಕೂಡ ಮಾಯಾಕೃತವಲ್ಲವೆ ? ಆದ್ದರಿಂದ ಸರ್ವಸಂಶಯಕ್ಕೂ ಕೊಡಲಿಯಾಗಿರುವ ಏಕತ್ವಜ್ಞಾನದಿಂದ ಕೃತಕೃತ್ಯತೆಯುಂಟಾಗುವದು. ಇದರಮೇಲೆ ಕೇಳಬೇಕಾದದ್ದು, ಹೇಳಬೇಕಾದದ್ದು-ಯಾವದೂ ಇಲ್ಲ.

ಈ ರೀತಿಯಾಗಿ ದಶೋಪನಿಷತ್ತುಗಳ ಸಾರವನ್ನು ಆ ಬ್ರಾಹ್ಮಣರು ಪ್ರತಿಪಾದಿಸಿ ಕೂಡಲೆ ಎದ್ದು 'ಕಾರ್ಯಾನ್ತರಂ' ಎಂದು ಹೇಳಿ ಮಹಾ

ರಾಜನೂ ರಾಣಿಯೂ ಕಾಳಿದಾಸನೂ ನೋಡುತ್ತಿದ್ದ ಹಾಗೆಯೇ ಹೊರಟು ಹೋಗಿಬಿಟ್ಟರು. ಆಗ ರಾಜನು ದಿಗ್ಭ್ರಮೆಗೊಂಡು 'ಇದೇನು, ಗುರುಗಳು ಹೊರಟುಬಿಟ್ಟರು ! ತಿರುಗಿ ಬರುವರೆ ?' ಎಂದು ಕಾಳಿದಾಸನನ್ನು ಕೇಳು ವಷ್ಟರಲ್ಲಿ ಮನೆಯ ಮುಂದೆ ಅನೇಕ ಜನರು ಮಾತನಾಡುವ ಗದ್ದಲವು ಕಿವಿಗೆ ಬಿತ್ತು. ಆಗ ಕಾಳಿದಾಸನು ಕೂಡ ಯಾವದೊಂದೂ ತಿಳಿಯದವನಾಗಿ ಥಟ್ಟನೆ ಎದ್ದು ಹೊರಗೆ ಹೋಗಿ ನೋಡುವಲ್ಲಿ ಸನಕಾದಿಮುನಿಗಳನ್ನು ಕಂಡು ಆಶ್ಚರ್ಯಪಟ್ಟರು. ಅವರು 'ನಮ್ಮ ಗುರುಗಳಾದ ವ್ಯಾಸದೇವರು ಇಲ್ಲಿಗೆ ಬಂದರಲ್ಲ, ಒಳಗೆ ಇದಾರೆಯೆ!' ಎಂದು ಕೇಳಲು ಕಾಳಿದಾಸನು ಅವರನ್ನು ವಂದನಪೂರ್ವಕವಾಗಿ ಒಳಕ್ಕೆ ಕರೆತಂದು ಮಹಾರಾಜನಿಗೆ ಎಲ್ಲವನ್ನೂ ವಿವರಿಸಿದನು. ಆಗ ಮಹಾರಾಜನು 'ಇದುವರೆಗೂ ನಮಗೆ ಜ್ಞಾನೋಪ ದೇಶವನ್ನು ಮಾಡಿದ ಮಹಾತ್ಮರು ವೇದವ್ಯಾಸದೇವರೆ! ನಮಗೆ ಒಂದೂ ತಿಳಿಯಲಿಲ್ಲವಲ್ಲ! ಯಾರೋ ಬ್ರಾಹ್ಮಣರು ಎಂದಲ್ಲವೆ, ಚಿಂತಿಸಿದೆನು ? ನಾನು ಕೊಟ್ಟ ಕಾಣಿಕೆಗಳು ಯಾವದನ್ನೂ ಪುರಸ್ಕರಿಸಲಿಲ್ಲವಲ್ಲ ! ವ್ಯಾಸ ದೇವರು ಎಂದು ತಿಳಿದಿದ್ದರೆ ಅವರಿಗೆ ಕನಕಾಭಿಷೇಕವನ್ನೇ ಮಾಡುತ್ತಿದ್ದೆ ನಲ್ಲ ! ಅಯ್ಯೋ ! ಕಳೆದುಕೊಂಡ ಸುಸಮಯವು ಮತ್ತೆ ಬಂದೀತೆ ?" ಎಂದು ಪೇಚಾಡಿದನು.

ಕಾಳಿ : ಮಹಾಸ್ವಾಮಿ, ನಾನು ಕೂಡ ತಮ್ಮಂತೆಯೇ ಮರು ಳಾದೆನು. ಅವರು ನನ್ನ ಗುರುವೇ ಸರಿ. ಆದರೆ ಅವರನ್ನು ಯಾರೋ ಒಬ್ಬ ಬಡವೈದಿಕನೆಂದು ನೆನಸಿ ತಮ್ಮಲ್ಲಿ ದ್ರವ್ಯಸಹಾಯವನ್ನು ಮಾಡಿಸ ಬೇಕೆಂದು ಕರೆತಂದೆನು. ಯಾರನ್ನೇ ಆಗಲಿ, ನೋಡಿದ ಮಾತ್ರಕ್ಕೆ "ಇವರು ಇಂಥವರು" ಎಂದು ಗೊತ್ತುಮಾಡುವದು ಅಸಾಧ್ಯ. 'ಪ್ರತ್ಯಕ್ಷಂ ಪ್ರಮಾ ಣಮ್' ಎಂಬ ಈ ನಮ್ಮ ಜ್ಞಾನವು ಮೂರು ಕಾಸು ಬಾಳೀತೇ ? ಪರ ಮಾತ್ಮನು ಎಲ್ಲೆಲ್ಲಿಯೂ ಇದ್ದು ಯಾರುಯಾರಿಗೆ ಯಾವಯಾವ ಕಾಲದಲ್ಲಿ ಯಾವಯಾವ ರೂಪವಾದ ಸಹಾಯವನ್ನು ಮಾಡಬೇಕೋ ಅದದನ್ನೇ ಮಾಡುವನು. ನಾವು ಮಾತ್ರ ಎದುರಿನಲ್ಲಿರುವ ವ್ಯಕ್ತಿಯೇ ಸತ್ಯವೆಂಬ ಭಾವನೆಯಿಂದ ಸರ್ವವೇಷಧಾರಿಯಾದ ಪರಮಾತ್ಮನನ್ನು ಅರಿಯುವದಿಲ್ಲ ವಲ್ಲ ! ಇದು ಎಂಥಾ ಮಾಯಾವಿಲಾಸ !

ಮಹಾರಾಣಿ — ಕವಿವರ್ಯರೆ, ನಿಮ್ಮ ಅನುಗ್ರಹದಿಂದ ವ್ಯಾಸ ದೇವರನ್ನೇ ನಾನು ನೋಡಿದ ಹಾಗಾಯಿತು. ಸ್ತ್ರೀಯರಿಗೆ ಕೂಡ ಆತ್ಮ ಜ್ಞಾನವನ್ನು ಪಡೆಯಲು ಅಧಿಕಾರವುಂಟೆಂದು ಸಾಕ್ಷಾದ್ವೇದರೂಪರಾದ ವ್ಯಾಸದೇವರೇ ಒಪ್ಪಿದ ಹಾಗಾಯಿತು. ನಾನೂ ಕೃತಕೃತ್ಯಳಾದೆನು. ನಮ್ಮಂಥವರ ಮೇಲೂ ಅವರ ಅನುಗ್ರಹವಿದೆಯಲ್ಲ, ಇಷ್ಟೇ ಸಾಕು.

ಸನಕಾದಿಗಳು.... ಇದೇನೂ ಆಶ್ಚರ್ಯವಲ್ಲ, ನಮ್ಮ ಗುರುಗಳು ಪ್ರತಿಕ್ಷಣದಲ್ಲಿಯೂ ಸರ್ವಲೋಕಗಳಲ್ಲಿಯೂ ಇದ್ದುಕೊಂಡು ಸರ್ವರಿಗೂ ಜ್ಞಾನವನ್ನು ಉಪದೇಶಮಾಡುತ್ತಿರುವರು. ಮೊನ್ನೆಯ ದಿನ ನಮ್ಮ ಆಶ್ರಮ ದಿಂದ ಭೋಜಮಹಾರಾಜನಿಗೆ ಉಪದೇಶವನ್ನು ಕೊಡಬೇಕೆಂದು ಹೊರಟರು. ಈ ದಿನ ಇಲ್ಲಿ ಇರುವೆವೆಂದು ನಮಗೆ ವಾಗ್ದಾನಮಾಡಿದ್ದರಿಂದ ಅವರನ್ನು ಹುಡುಕಿಕೊಂಡು ಬಂದೆವು. ಈಗ ನಮ್ಮ ಆಶ್ರಮಕ್ಕೆ ಅವರು ತೆರಳಿರ ಬಹುದು. ನಾವು ಅಲ್ಲಿಗೆ ಹೋಗಿ ಅವರ ಸಂದರ್ಶನವನ್ನು ಪಡೆಯುವೆವು.

ಹೀಗೆಂದು ಆ ಮುನಿಗಳೆಲ್ಲರೂ ರಾಜನಿಂದಲೂ ಕಾಳಿದಾಸನಿಂದಲೂ ಸನ್ಮಾನವನ್ನು ಹೊಂದಿ ಸ್ವಸ್ಥಾನಕ್ಕೆ ಹೊರಟರು. ಮಹಾರಾಜನೂ ಮಹಾ ರಾಣಿಯೂ ಪರಮಾನಂದದಲ್ಲಿ ಮಗ್ನರಾಗಿ ಮಾತನಾಡುವದಕ್ಕೆ ತೋಚದೆ ಅರಮನೆಗೆ ಹೋಗಿ ಸೇರಿದರು.

ವಾಚಕರೆ, ಈ ಕಥೆಯನ್ನು ಹೇಳಿದ ಪುಚ್ಛಬ್ರಹ್ಮವಾದಿಗಳೆಂಬ ಸಾಧು ಗಳಿಗೆ ನಾನು ದಂಡವತ್ಪ್ರಣಾಮವನ್ನು ಮಾಡಿ ಆನಂದಭರಿತವಾದ ಮನ ದೊಡನೆ ಹಿಂತಿರುಗಿದೆನು. ಯಾವ ಹುತ್ತದಲ್ಲಿ ಯಾವ ಹಾವು ಇರುವದೋ, ಯಾವ ಸಮುದ್ರಭಾಗದಲ್ಲಿ ಯಾವ ರತ್ನವಿರುವದೋ ಯಾರಿಗೆ ಗೊತ್ತು ?

# ಪರಿಶಿಷ್ಟ-ಪ್ರಮಾಣವಾಕ್ಯಗಳು

ಈ ಹೊತ್ತಿಗೆಯಲ್ಲಿ ಅಲ್ಲಲ್ಲಿ ಪರಾಮೃಷ್ಟವಾಗಿರುವ ಶ್ರುತಿವಾಕ್ಯಗಳನ್ನು ಇಲ್ಲಿ ಪೂರ್ಣವಾಗಿ ಕೊಟ್ಟಿದೆ. ಆ ವಾಕ್ಯಗಳ ಅರ್ಥವನ್ನೂ ತಾತ್ಪರ್ಯವನ್ನೂ ತಿಳಿಯಬೇಕೆಂದು ಇಚ್ಛಿಸುವವರು ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಉಪನಿಷದ್ಭಾಷ್ಯಗಳನ್ನು ನೋಡಬೇಕು.

೧. ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದ ಮಾಯಾನ್ನಾಸ್ತ್ಯಕೃತಃ ಕೃತೇನ | ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ||
(ಮುಂ. ೧-೨-೧೨).

೨. ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ |
ತೇನ ತ್ಯಕ್ತೇನಭುಞ್ಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್|| (ಈ.೧).

೩. ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ |
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ || (ಈ.೨)

೪. ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ |
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ||(ಈ.೧)

೫. ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ |
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ||
(ಕೇ. ೧-೧-೪)

೬. ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ |
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ||
(ಮಾಂ. ಕಾ. ೧-೧೭).

೭. ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ |
ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ||
(ಕ. ೨–೧–೪)

೮. ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯಮಶರೀರ ಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ | ಸ ಸರ್ವಜ್ಞಃ ಸರ್ವೋ ಭವತಿ ತದೇಷ ಶ್ಲೋಕಃ || (ಪ್ರ. ೪–೧೦)

೯. ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ ಸಂಪ್ರ ತಿಷ್ಠನ್ತಿ ಯತ್ರ | ತದಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವಮೇವಾವಿವೇಶೇತಿ (ಪ್ರ. ೪–೧೧)

೧೦. ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷ ಸ್ವಜಾತೇ | ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ||

೧೧. ನಾನ್ತಃಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃಪ್ರಜ್ಞಂ ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಮ್ | ಅದೃಶ್ಯಮವ್ಯವ ಹಾರ್ಯಮಗ್ರಾಹ್ಯಮಲಕ್ಷಣಮಚಿನ್ತ್ಯಮವ್ಯಪದೇಶ್ಯಮೇಕಾತ್ಮ ಪ್ರತ್ಯಯಸಾರಂ ಪ್ರಪಞ್ಚೋಪಶಮಂ ಶಾನ್ತಂ ಶಿವಮದ್ವೈತಂ ಚತುರ್ಥಂ ಮನ್ಯನ್ತೇ ಸ ಆತ್ಮಾ ಸ ವಿಜ್ಞೇಯಃ || (ಮಾಂ. ೭)

೧೨. ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯ ನೇಽಭಯಂ ಪ್ರತಿಷ್ಠಾಂ ವಿನ್ದತೇ | ಅಥ ಸೋಽಭಯಂ ಗತೋ ಭವತಿ | ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ | ಅಥ ತಸ್ಯ ಭಯಂ ಭವತಿ || (ತೈ. ೨–೭)

೧೩. ಸ ಯಶ್ಚಾಯಂ ಪುರುಷೇ | ಯಶ್ಚಾಸಾವಾದಿತ್ಯೇ | | ಸ ಏಕಃ ||
(ತೈ. ೨–೮)

೧೪. ಏಷ ಬ್ರಹ್ಮೈಷ ಇನ್ದ್ರ ಏಷ ಪ್ರಜಾಪತಿರೇತೇ ಸರ್ವೇ ದೇವಾ ಇಮಾನಿ ಚ ಪಞ್ಚಮಹಾಭೂತಾನಿ ಪೃಥಿವೀ ವಾಯುರಾಕಾಶ ಆಪೋ ಜ್ಯೋತೀಂಷೀತ್ಯೇತಾನೀಮಾನಿ ಚ ಕ್ಷುದ್ರಮಿಶ್ರಾಣೀವ । ಬೀಜಾನಿ ತರಾಣಿ ಚೇತರಾಣಿ ಚಾಣ್ಡಜಾನಿ ಚ ಜಾರುಜಾನಿ ಚ ಸ್ವೇದಜಾನಿ ಚೋದ್ಭಿಜ್ಜಾನಿ ಚಾಶ್ವಾ ಗಾವಃ ಪುರುಷಾ ಹಸ್ತಿನೋ ಯತ್ಕಿಂಚೇದಂ ಪ್ರಾಣಿ ಜಙ್ಗಮಂ ಚ ಪತತ್ರಿ ಚ ಯಚ್ಚ ಸ್ಥಾವರಂ ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥ (ಐ. ೩-೧)

೧೫. ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ । ಸೈಷಾ ವಿದೃತಿರ್ನಾಮ ದ್ವಾಸ್ತದೇತನ್ನಾನ್ದನಂ ತಸ್ಯ ತ್ರಯ ಆವಸಥಾ ಸ್ತ್ರಯಃ ಸ್ವಪ್ನಾ ಅಯಮಾವಸಥೋಽಯಮಾವಸಥೋಽಯಮಾವ ಸಥ ಇತಿ ॥ (ಐ. ೧-೩)

೧೬. ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ....॥ (ಛಾಂ. ೬-೮-೭—)

೧೭. ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ಪಶ್ಯೇತ್ ॥ (ಬೃ. ೪-೩-೨೩....)

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ